**ಪಾಠ–9** **ಫೆಬ್ರವರಿ 22–28**

# ಮಲೀನತ್ವದಿಂದ ಶುದ್ಧತ್ವಕ್ಕೆ



**ಸಬ್ಬತ್ತಿನ ಮಧ್ಯಾಹ್ನ : ಈ ವಾರದ ಪಾಠದ ಅಧ್ಯಯನಕ್ಕಾಗಿ ಓದಿರಿ :** ದಾನಿಯೇಲ 8, ದಾನಿ 2:38, ಆದಿಕಾಂಡ 11:4, ಯಾ.ಕಾಂಡ 16, ಇಬ್ರಿ 9:23–28.

**ಸ್ಮರಣವಾಕ್ಯ : "ಉದಯಾಸ್ತಮಾನಗಳ ಎರಡು ಸಾವಿರದ ಮುನ್ನೂರರವರೆಗೆ ನಡೆಯುವವು; ಅನಂತರ ಪವಿತ್ರಾಲಯಕ್ಕೆ ಪುನಃ ನ್ಯಾಯಸ್ಥಾಪನೆಯಾಗುವುದು ಎಂದು ಹೇಳಿದನು"** (ದಾನಿಯೇಲ 8:14).

ದಾನಿಯೇಲ 8ನೇ ಅಧ್ಯಾಯದಲ್ಲಿ ಪ್ರಸ್ತಾಪವಾಗಿರುವ ದರ್ಶನವು ದಾನಿಯೇಲನಿಗೆ ಕ್ರಿ.ಪೂ. 548ರಲ್ಲಿ ಅಥವಾ 547ರಲ್ಲಿ ಕೊಡಲ್ಪಟ್ಟಿದ್ದು ಇದು ದಾನಿಯೇಲ 7ನೇ ಅಧ್ಯಾಯದಲ್ಲಿ ಉಲ್ಲೇಖವಾಗಿರುವ ನ್ಯಾಯತೀರ್ಪಿನ ವಿಷಯದಲ್ಲಿ ಮಹತ್ವದ ಸ್ಪಷ್ಟನೆಯನ್ನು ಒದಗಿಸುತ್ತದೆ. ದಾನಿಯೇಲ 2 ಮತ್ತು 7ನೇ ಅಧ್ಯಾಯಗಳಲ್ಲಿ ಬ್ಯಾಬಿಲೋನ್ ಸಾಮ್ರಾಜ್ಯದ ಉಲ್ಲೇಖವಿದೆ ಆದರೆ ದಾನಿಯೇಲ 8ನೇ ಅಧ್ಯಾಯದಲ್ಲಿ ಬ್ಯಾಬಿಲೋನ್ ಸಾಮ್ರಾಜ್ಯವು ಬಿಡಲ್ಪಟ್ಟು ಮೇದ್ಯೆಪಾರಸಿಯ ಸಾಮ್ರಾಜ್ಯದಿಂದ ಆರಂಭವಾಗುತ್ತದೆ. ಯಾಕೆಂದರೆ ಬ್ಯಾಬಿಲೋನ್ ಆವಾಗ ಅವನತಿ ಹೊಂದಿ ಮೇದ್ಯಪಾರಸಿಯನ್ನು ಲೋಕಶಕ್ತಿಯಾಗಿ ಅದರ ಸ್ಥಾನವನ್ನು ಆಕ್ರಮಿಸಿತು. 7ನೇ ಮತ್ತು 8ನೇ ಅಧ್ಯಾಯಗಳಲ್ಲಿರುವ ದರ್ಶನಗಳಲ್ಲಿ ಹೋಲಿಕೆಯಿದೆ (ಸಮಾಂತರವಾಗಿದೆ). ದಾನಿಯೇಲ 8ನೇ ಅಧ್ಯಾಯದಲ್ಲಿ ಪರಲೋಕದ ಮಹಾದೋಷ ಪರಿಹಾರ

ದಿನವು ಪರಲೋಕದ ದೇವದರ್ಶನ ಗುಡಾರದ ಶುದ್ಧೀಕರಣೆಗೆ ಸಂಬಂಧಪಟ್ಟಿರುವುದರಿಂದ ಇದರ ಭಾಷೆ ಮತ್ತು ಸಂಕೇತಗಳು ಹರಿತವಾದ ದೃಷ್ಟಿಯನು ಬೀರುತ್ತವೆ. ಹಾಗಾಗಿ ದಾನಿಯೇಲ 8ನೇ ಅಧ್ಯಾಯದ ಕೊಡುಗೆಯು ದೇವದರ್ಶನ ಗುಡಾರದ ವಿಷಯದಲ್ಲಿ ತನ್ನ ದೃಷ್ಟಿಯನ್ನು ನೆಡುವುದರಲ್ಲಿ ಒಳಗೊಂಡಿದೆ.

ದಾನಿಯೇಲ 7ನೇ ಅಧ್ಯಾಯವು ಪರಲೋಕದಲ್ಲಿ ಹಾಕಲ್ಪಟ್ಟ ನ್ಯಾಯಪೀಠವನ್ನು ಮತ್ತು ಮನುಷ್ಯಕುಮಾರನು ತನ್ನ ರಾಜ್ಯವನ್ನು ಸ್ವೀಕರಿಸುವುದನ್ನು ವಿವರಿಸುವಾಗ 8ನೇ ಅಧ್ಯಾಯವು ಪರಲೋಕದ ದೇವದರ್ಶನ ಗುಡಾರ ಶುದ್ಧೀಕರಣೆಯನ್ನು ವಿವರಿಸುತ್ತದೆ. 7ನೇ ಅಧ್ಯಾಯದ ನ್ಯಾಯವಿಚಾರಣೆ ಮತ್ತು 8ನೇ ಅಧ್ಯಾಯದ ಶುದ್ಧೀಕರಣೆ ಇವೆರಡೂ ಒಂದೇ ವಿಷಯವನ್ನು ಸೂಚಿಸುತ್ತಿವೆ.

ಈ ಪಾಠವನ್ನು ಫೆಬ್ರವರಿ 29ರ ಸಬ್ಬತ್ತಿಗೆ ಸಿದ್ಧಪಡಿಸಿಕೊಳ್ಳಿರಿ.

**ಭಾನುವಾರ** **ಫೆಬ್ರವರಿ 23**

## ಟಗರು ಮತ್ತು ಹೋತ

ಓದಿರಿ: ದಾನಿಯೇಲ 8ನೇ ಅಧ್ಯಾಯ. ಇಲ್ಲಿರುವ ದರ್ಶನವು ಯಾವ ವಿಷಯವನ್ನು ಕುರಿತು ಹೇಳುತ್ತದೆ ಮತ್ತು ಹೇಗೆ ದಾನಿಯೇಲ 2ನೇ ಮತ್ತು 7ನೇ ಅಧ್ಯಾಯಗಳಿಗೆ ಹೋಲುತ್ತದೆ?

ದಾನಿಯೇಲ 2 ಮತ್ತು 7ನೇ ಅಧ್ಯಾಯಗಳಲ್ಲಿರುವಂತೆ 8ನೇ ಅಧ್ಯಾಯದ ಭಿನ್ನವಾದ ಸಂಕೇತಗಳಿಂದ ಕೂಡಿರುವ ಲೋಕಸಾಮ್ರಾಜ್ಯಗಳ ಏಳುವಿಕೆ ಮತ್ತು ಬೀಳುವಿಕೆಗಳ ಮತ್ತೊಂದು ದರ್ಶನವು ನಮಗೆ ಕೊಡಲ್ಪಟ್ಟಿದೆ. ಈ ಪ್ರಕರಣದಲ್ಲಿ ಸಂಬಂಧಿಸಿದ ಟಗರು ಮತ್ತು ಹೋತಗಳ ಸಂಕೇತಗಳು ಉಪಯೋಗಿಸಲ್ಪಟ್ಟಿವೆ. ದೇವದರ್ಶನ ಗುಡಾರದ ಸೇವೆಯಲ್ಲಿ ಟಗರು ಮತ್ತು ಹೋತಗಳು ಯಜ್ಞಾರ್ಥವಾಗಿ ಅರ್ಪಿಸಲ್ಪಡುತ್ತಿದ್ದವು. ಆದರೆ ಒಟ್ಟಾಗಿ ಇವೆರಡೂ ಪ್ರಾಣಿಗಳು ಮಹಾದೋಷ ಪರಿಹಾರಕ ದಿನದಲ್ಲಿ ನಡೆಯುವ ಯಜ್ಞಕ್ಕೆ ಬೇಕಾಗುತ್ತಿದ್ದವು. ಆದುದರಿಂದ ದರ್ಶನದ ಮುಖ್ಯದೃಷ್ಟಿ ಮಹಾದೋಷಪರಿಹಾರಕ ದಿನವನ್ನು ನೆನಪಿಸುವಂತೆ ಇವೆರಡೂ ಪ್ರಾಣಿಗಳು ಉಪಯೋಗಿಸಲ್ಪಟ್ಟಿವೆ.

ದರ್ಶನವು ತೆರೆದುಕೊಳ್ಳುತ್ತಿದ್ದಂತೆ ಟಗರು, ಪಡುವಲು ಬಡಗಲು, ತೆಂಕಲು ಮೂರು ದಿಕ್ಕುಗಳಿಗೂ ಹಾದಾಡುತ್ತಿದ್ದುದನ್ನು ದಾನಿಯೇಲನು ಕಾಣುತ್ತಾನೆ (ದಾನಿ 8:4). ಟಗರಿನ ಮೂರು ದಿಕ್ಕುಗಳ ಚಲನೆಯು ರಾಜ್ಯದ ಮೂರು ದಿಕ್ಕುಗಳ ವಿಸ್ತರಣೆಯನ್ನು ಹೇಳುತ್ತದೆ. ಯಾವ ಜಂತುವೂ ಅದರೆದುರಿಗೆ ನಿಲ್ಲಲಾರದೆ ಹೋಯಿತು; ಅದರ ಕೈಯಿಂದ ಬಿಡಿಸಲು ಯಾವ ಪ್ರಾಣಿಗೂ ಶಕ್ತಿಯಿರಲಿಲ್ಲ; ಅದು ಮನಸ್ಸು ಬಂದಂತೆ ನಡೆದು ತನ್ನನ್ನು ಹೆಚ್ಚಿಸಿಕೊಂಡಿತು (ದಾನಿ 8:14). ಎರಡು ಕೊಂಬುಳ್ಳ ಟಗರು ಮೇದ್ಯ–ಪಾರಸಿಯ ಸಾಮ್ರಾಜ್ಯವನ್ನು ಪ್ರತಿನಿಧಿಸುತ್ತಿದ್ದು ಮೂರು ದಿಕ್ಕುಗಳು ಈ ಲೋಕಶಕ್ತಿಯ ಮೂರುಗೆಲುವುಗಳನ್ನು ಸೂಚಿಸುತ್ತವೆಂದು ದೂತನು ದಾನಿಯೇಲನಿಗೆ ವಿವರಿಸುತ್ತಾನೆ.

ತರುವಾಯ ದೊಡ್ಡ ಕೊಂಬುಳ್ಳ ಹೋತವು ಹೊರಡುತ್ತದೆ ಇದು ಅಲೆಕ್ಸಾಂಡರ್ ಮಹಾಶಯನ ಗ್ರೀಕ್ ಸಾಮ್ರಾಜ್ಯವಾಗಿದೆ (ದಾನಿ 8:21). "ಆ ಹೋತವು ನೆಲಕ್ಕೆ ಸೋಕಿಸದೆ ಚಲಿಸುತ್ತದೆ" (ದಾನಿ 8:5) ಎನ್ನುವುದು ಶೀಘ್ರವಾಗಿ ಚಲಿಸುವುದನ್ನು ಸೂಚಿಸುತ್ತದೆ. ಈ ಸಂಕೇತವು ಅಲೆಕ್ಸಾಂಡರ್‌ನ ದಿಗ್ವಿಜಯದ ಶೀಘ್ರತೆಯನ್ನು ತಿಳಿಯಪಡಿಸುತ್ತದೆ, ದಾನಿಯೇಲ 7ನೇ ಅಧ್ಯಾಯದಲ್ಲಿ ರೆಕ್ಕೆಗಳುಳ್ಳ ಚಿರತೆಗೆ ಈತನ ರಾಜ್ಯವನ್ನು ಹೋಲಿಸಲಾಗಿದೆ. ಆದರೆ ಪ್ರವಾದಿ ಹೇಳುವಂತೆ ಈ ಹೋತವು ಪ್ರಾಬಲ್ಯಕ್ಕೆ ಬಂದಾಗ ಅದರ ದೊಡ್ಡಕೊಂಬು ಮುರಿಯಲ್ಪಟ್ಟಿತು (ದಾನಿ 8:8) ಮುರಿಯಲ್ಪಟ್ಟು ನಾಲ್ಕು ಕೊಂಬುಗಳಿಗೆ ಅವಕಾಶ ಮಾಡಿಕೊಟ್ಟಿತು. ಒಂದು ವೃತ್ತ ಪರಿಧಿಯ ನಾಲ್ಕನೆ ಒಂದು ಭಾಗ ಅಂತಹ ನಾಲ್ಕು ಭಾಗಗಳಿಗೆ ವಿಸ್ತರಿಸಲ್ಪಟ್ಟಿತು. ಕ್ರಿ.ಪೂ. 323ರ ಜೂನ್ ಮಾಸದಲ್ಲಿ ಬ್ಯಾಬಿಲೋನಿನಲ್ಲಿ ಅಲೆಕ್ಸಾಂಡರನು ಮರಣ ಹೊಂದಿದ ಬಳಿಕ ಆತನ ರಾಜ್ಯವು ನಾಲ್ಕು ಸೇನಾಧಿಪತಿಗಳಿಗೆ ನಾಲ್ಕು ಭಾಗಗಳಾಗಿ ವಿಭಾಗಿಸಲ್ಪಟ್ಟಾಗ ಇದು ನೆರವೇರಿತು.

ದಾನಿಯೇಲ 2:38 ರಿಂದ ದಾನಿಯೇಲ 8:20, 21 ರವರೆಗೆ ದರ್ಶನದಲ್ಲಿ ತೋರಿಸಲ್ಪಟ್ಟ ನಾಲ್ಕು ರಾಜ್ಯಗಳ ಪೈಕಿ ಮೂರು ರಾಜ್ಯಗಳನ್ನು ನಮಗೋಸ್ಕರ ಗುರುತು ಮಾಡಿ ಹೆಸರಿಸಲಾಗಿದೆ. ಈ ಪ್ರವಾದನೆಗಳ ಸರಿಯಾದ ಅರ್ಥೈಸುವಿಕೆಯನ್ನು ದೃಢಪಡಿಸಲು ಆಶ್ಚರ್ಯಕರವಾದ ಈ ಸರಗತಿಯು ನಮಗೆ ಹೇಗೆ ಸಹಾಯ ಮಾಡುತ್ತದೆ?

**ಸೋಮವಾರ** **ಫೆಬ್ರವರಿ 24**

## ಮೊಳೆತು ಬಂದ ಚಿಕ್ಕಕೊಂಬು

ಓದಿರಿ: ದಾನಿಯೇಲ 8:8–12ನ್ನು ಎಚ್ಚರಿಕೆಯಿಂದ ಓದಿರಿ. ಯಾವ ದಿಕ್ಕಿನ ಕಡೆಗೆ ಚಿಕ್ಕಕೊಂಬು ಚಲಿಸಿತು ಮತ್ತು ಅರ್ಥಮಾಡಿಕೊಳ್ಳುವುದಕ್ಕೆ ಇದು ಯಾಕೆ ಮುಖ್ಯವಾಗಿದೆ?

ನಾಲ್ಕು ಕೊಂಬುಗಳು ಬೆಳೆದು ನಾಲ್ಕು ದಿಕ್ಕುಗಳಿಗೆ ಚಾಚಿಕೊಂಡನ್ನು ವಿವರಿಸಿದ ಮೇಲೆ ಆ ನಾಲ್ಕು ಕೊಂಬುಗಳ ನಡುವೆ ಚಿಕ್ಕದೊಂದು ಕೊಂಬು ಮೊಳೆಯಿತೆಂದು ಸತ್ಯವೇದ ವಚನವು ಹೇಳುತ್ತದೆ. ಕೊಂಬು ಅಥವಾ ಅಧಿಕಾರ ನಿನ್ನೆಯ ಪಾಠದಲ್ಲಿ ನೋಡಿದಂತೆ ಇದು ಅಲೆಕ್ಸಾಂಡರದ ನಾಲ್ಕು ಸೇನಾಪತಿಗಳನ್ನು ಪ್ರತಿನಿಧಿಸುವ ನಾಲ್ಕು ಕೊಂಬಗಳ ಪೈಕಿ ಒಂದು ಕೊಂಬಿನಿಂದ ಬಂದಿತೋ ಅಥವಾ ಒಂದು ದಿಕ್ಕಿನಿಂದ ಬಂದಿತೋ ಎಂಬುದೇ ಪ್ರಶ್ನೆ. ಮೂಲಭಾಷೆಯಲ್ಲಿ ಈ ವಾಕ್ಯದ ವಾಕ್ಯರಣ ಸಂರಚನೆಯು ಈ ಕೊಂಬು ನಾಲ್ಕು ದಿಕ್ಕುಗಳಲ್ಲಿ ಒಂದು ದಿಕ್ಕಿನಿಂದ ಬಂದಿತೆಂದು ಸೂಚಿಸುತ್ತದೆ. ಈ ಅಧಿಕಾರವು ಗ್ರೀಕ್ ಸಾಮ್ರಾಜ್ಯವು ನಾಲ್ಕು ಶಾಖೆಗಳಾಗಿ ಭಾಗವಾದ ನಂತರ ಕಾಣಿಸಿಕೊಂಡಿತು. ಒಂದು ಸಾಮಾನ್ಯವಾದ ತಿಳುವಳಿಕೆಯಂತೆ ಈ ಕೊಂಬು 'ರೋಮ್' ಎಂಬುದಾಗಿ ಹೇಳಬಹುದು ಮೊದಲು ಅಕ್ರೈಸ್ತೀಯ ರೋಮ್ ನಂತರ ಪೋಪ್ ರೋಮ್. "ಚಿಕ್ಕಕೊಂಬು ರೋಮ್‌ನ ಎರಡೂ ಘಟ್ಟಗಳನ್ನು ಪ್ರತಿನಿಧಿಸುತ್ತದೆ. ದಾನಿಯೆಲನು ಮೊದಲು ಇಸ್ರಾಯೇಲ್ಯ ಮತ್ತು ಆದಿಕ್ರೈಸ್ತರನ್ನು ಹಿಂಸೆ ಪಡಿಸಿದ ಸಾಮ್ರಾಜ್ಯಶಾಹಿ ಅಕ್ರೈಸ್ತ ರೋಮ್‌ನ್ನು ನಂತರ ಪೋಪ್‌ಶಾಹಿಯ ರೋಮನ್ನು ನೋಡಿದನು. ಇದು ನಮ್ಮ ಕಾಲದವರೆಗೂ ಮತ್ತೂ ಭವಿಷ್ಯದಲ್ಲೂ ಮುಂದುವರೆದುಕೊಂಡು ಹೋಗುತ್ತದೆ" – ಸೆವೆಂತ್ ಡೇ ಅಡ್ವೆಂಟಿಸ್ಟ್ ಬೈಬಲ್ ವ್ಯಾಖ್ಯಾನ, 4ನೇ ಸಂಪುಟ, 841ನೇ ಪುಟ.

ಸತ್ಯವೇದದ ವಾಕ್ಯಾನುಸಾರ ಚಿಕ್ಕಕೊಂಬು ಭೂಮಿಯ ಅಗಲಕ್ಕೆ (ಅಡ್ಡಲಾಗಿ) ಚಲಿಸುತ್ತಾ ಹೋಗುತ್ತದೆ. "ದೊಡ್ಡದಾಗಿ ಬೆಳೆದು ತೆಂಕಲಲ್ಲಿಯೂ ಮೂಡಲಲ್ಲಿಯೂ ಅಂದಚಂದದ ದೇಶದಲ್ಲಿಯೂ ಪ್ರಬಲವಾಯಿತು" (ದಾನಿ 8:9). ಮೂರು

ದಿಕ್ಕುಗಳು ಅಕ್ರೈಸ್ತರೋಮ್‌ನ ಮೂರು ದೊಡ್ಡ ಪ್ರದೇಶಗಳಿಗೆ ಅನುಕ್ರಮವಾಗಿದೆ.

ಚಿಕ್ಕಕೊಂಬು ದರ್ಶನದಲ್ಲಿ ಪ್ರಮುಖ ಪಾತ್ರದಾರನಾಗಿ ಬೆಳೆದಂತೆ ಅದರ ಲಂಬವಾದ ವಿಸ್ತರಣೆಯು ಸವಿವರವಾದ ಗಮನವನ್ನು ಪಡೆಯಿತು. ಈ ನಿಟ್ಟಿನಲ್ಲಿ ಕೊಂಬು ದಾನಿಯೇಲ 7ನೇ ಅಧ್ಯಾಯದ ಕೊಂಬಿಗೆ ಬಹಳ ನಿಕಟವಾಗಿ ಹೊಂದುತ್ತದೆಂದು ಈ ಕೆಳಗೆ ಕೊಟ್ಟಿರುವ ಹೋಲಿಕೆಯು ತೋರಿಸಿಕೊಡುತ್ತದೆ: (1) ಆರಂಭದಲ್ಲಿ ಎರಡೂ ಕೊಂಬುಗಳು ಚಿಕ್ಕದಾಗಿರುತ್ತವೆ (ದಾನಿ 7:8 ಮತ್ತು 8:9) (2) ನಂತರ ಎರಡೂ ಕೊಂಬುಗಳು ಬೆಳೆದು ದೊಡ್ಡದಾಗುತ್ತವೆ (ದಾನಿ 7:2 ಮತ್ತು 8:9). (3) ಎರಡು ಹಿಂಸೆ ಪಡಿಸುವ ಅಧಿಕಾರಿಗಳು (ದಾನಿ 7:21, 25 ಮತ್ತು 8:10,24). (4) ಎರಡೂ ತಮ್ಮನ್ನು ತಾವು ಹೆಚ್ಚಿಸಿಕೊಂಡು ದೇವರನ್ನು ದೂಷಿಸಿದವು (ದಾನಿ 7:8,20,25 ಮತ್ತು 8:10, 11, 25). (5) ಎರಡೂ ದೇವಜನರನ್ನು ಗುರಿಮಾಡುತ್ತದೆ (ದಾನಿ 7:25 ಮತ್ತು 8:24). (6) ಎರಡರ ಚಟುವಟಿಕೆಯ ಭಾಗಗಳು ಪ್ರವಾದನೆ ಕಾಲಗಳನ್ನು ನಿರೂಪಿಸುತ್ತವೆ (ದಾನಿ 7:25 ಮತ್ತು 8:13,14). (7) ಎರಡೂ ಅಂತ್ಯಕಾಲದವರೆಗೆ ವಿಸ್ತರಿಸಲ್ಪಡುತ್ತವೆ (ದಾನಿ 7:25,26 ಮತ್ತು 8:17, 19). (8) ಎರಡೂ ಸರ್ವನಾಶಕ್ಕೆ ಗುರಿಯಾಗುತ್ತವೆ (ದಾನಿ 7:11, 26 ಮತ್ತು 8:25). ಕಡೆಯದಾಗಿ, ದಾನಿಯೇಲ 7ನೇ ಅಧ್ಯಾಯದ ಚಿಕ್ಕಕೊಂಬು ಪೋಪುಶಾಹಿಯನ್ನು ಪ್ರತಿನಿಧಿಸುವುದರಿಂದ 8ಣೇ ಅಧ್ಯಾಯುದಲ್ಲಿ ಚಿಕ್ಕಕೊಂಬಿನ ಲಂಬವಾದ ಚಲನೆಯು ಇದೇ ಅಧಿಕಾರವನ್ನೇ ಪ್ರತಿನಿಧಿಸುತ್ತದೆ. ಹಾಗಾಗಿ ದಾನಿಯೇಲ 2ನೇ ಅಧ್ಯಾಯ ಮತ್ತು 7ನೇ ಅಧ್ಯಾಯದಲ್ಲಿ ಅಂತಿಮವಾದ ಪ್ರಮುಖವಾದ ಅಧಿಕಾರ ಅಕ್ರೈಸ್ತೀಯ ಮತ್ತು ಪೋಪುಶಾಹಿಯ ರೋಮಿನದಾಗಿರುತ್ತದೆ.

**ಮಂಗಳವಾರ** **ಫೆಬ್ರವರಿ 25**

## ಪವಿತ್ರಸ್ಥಾನವನ್ನು ಆಕ್ರಮಿಸಿಕೊಳ್ಳುವುದು

ಓದಿರಿ : ದಾನಿಯೇಲ 8:10–12. ಯಾವ ತೆರನಾದ ಚಟುವಟಿಕೆಯನ್ನು ಚಿಕ್ಕಕೊಂಬು ಇಲ್ಲಿ ಮಾಡುತ್ತಿರುವುದಾಗಿ ಚಿತ್ರಿತವಾಗಿದೆ?

ದಾನಿಯೇಲ 8:10 ರಲ್ಲಿ ಬಾಬೆಲ್ ಗೋಪುರವನ್ನು ಕಟ್ಟುವವರು ಪರಿಶ್ರಮ

ಪಟ್ಟಂತೆಯೇ ಚಿಕ್ಕಕೊಂಬು ಸಹ ಆತ್ಮೀಕಮಟ್ಟದಲ್ಲಿ ಯಥಾವತ್ತಾದ ಪ್ರತಿಕೃತಿಯನ್ನು ನಿರ್ಮಿಸಲು ಪ್ರಯತ್ನಿಸುತ್ತದೆ (ಆ.ಕಾಂಡ 11:4). ನಕ್ಷತ್ರ ಮತ್ತು ಗಣ ಎಂಬ ಪದಗಳು ಹಳೆಯ ಒಡಂಬಡಿಕೆಯಲ್ಲಿ ದೇವಜನರಿಗೆ ಅನ್ವಯಿಸುತ್ತವೆ. ಇಸ್ರಾಯೇಲ್ಯರು ಯೆಹೋವನ ಸೈನ್ಯವೆಂಬುದಾಗಿ ಕರೆಯಲ್ಪಟ್ಟಿದ್ದಾರೆ (ಆ.ಕಾಂಡ 12:41). ದಾನಿಯೇಲನು ಸಹಾ ನಂಬಿಗಸ್ತರಾದ ದೇವಜನರನ್ನು ಹೊಳೆಯುವ ನಕ್ಷತ್ರಗಳೆಂದು ಬಣ್ಣಿಸಿದ್ದಾನೆ (ದಾನಿ 12:3). ಚಿಕ್ಕಕೊಂಬು ನಕ್ಷತ್ರಗಣದ ಮೇಲೆ ಕೈವಾಡಿತು ಎಂಬುದನ್ನು ನಕ್ಷತ್ರಗಳ ಮೇಲೆ ಅಕ್ಷರಶಃ ನಡೆಯುವ ಆಕ್ರಮಣವಾಗಿರದೆ ಪರಲೋಕದ ಹಕ್ಕುಬಾಧ್ಯತೆ ಹೊಂದಿರುವ ದೇವಜನರ ಮೇಲೆ ನಡೆಯುವ ಹಿಂಸೆಯಾಗಿದೆ (ಫಿಲಿ 3:20). ಅಕ್ರೈಸ್ತರೋಮ್ ಸಾಮ್ರಾಜ್ಯಶಾಹಿ ಸಾವಿರ ಸಾವಿರ ಕ್ರೈಸ್ತರನ್ನು ಕೊಂದಿದ್ದಾಗ್ಯೂ ಈವಾಗ ಚಿಕ್ಕಕೊಂಬು ಆಕಾಶದ ಕಡೆಗೆ ಲಂಬವಾಗಿ ನಡೆಸುವ ಚಟುವಟಿಕೆಗಳ ಮೇಲೆ ಗಮನ ಹರಿಸುತ್ತದೆ. ಹಾಗಾಗಿ ಅಂತಿಮವಾದ ಪ್ರವಾದನೆಯ ನೆರವೇರಿಕೆಯು ಬಹಳ ವರ್ಷಗಳಿಂದಲೂ ಹಿಂಸಾಚಾರವನ್ನು ನಡೆಸಿಕೊಂಡು ಬರುತ್ತಿರುವ ಪೋಪುಶಾಹಿಗೆ ಸಂಬಂಧಪಡುತ್ತದೆ.

ದಾನಿಯೇಲ 8:11 ಗಣದ ಅಧಿಪತಿಯ ಬಗ್ಗೆ ಮಾತಾಡುತ್ತದೆ. ದಾನಿಯೇಲ ಪುಸ್ತಕದ ಮತ್ತೊಂದು ಸಂದರ್ಭದಲ್ಲಿ ಇವನನ್ನು "ಅಭಿಷಿಕ್ತನಾದ ಪ್ರಭು" ಎಂಬುದಾಗಿ ಉಲ್ಲೇಖಿಸಲಾಗಿದೆ (ದಾನಿ 9:25). "ನಿಮ್ಮ ಪಾಲಕನಾದ ಮೀಕಾಯೇಲ" (ದಾನಿ 10:21), ಮಹಾಪಾಲಕನಾದ ಮೀಕಾಯೇಲ ಎಂತಲೂ ಉಲ್ಲೇಖಗಳಿವೆ (ದಾನಿ 12:1). ಯೇಸುಕ್ರಿಸ್ತನಲ್ಲದೆ ಬೇರ್ಯಾರೂ ಈ ಪದಗಳಿಗೆ ಉಲ್ಲೇಖಿತನಾಗುವುದಿಲ್ಲ. ಯೇಸುಕ್ರಿಸ್ತನೇ ಈ ಹಿಂದೆ ಉಲ್ಲೇಖಿತವಾಗಿರುವ ಗಣಗಳ ಅಧಿಪತಿ (ಪ್ರಭು) ಮತ್ತು ಪರಲೋಕದಲ್ಲಿರುವ ಮಹಾಯಾಜಕನು. ಆದುದರಿಂದ ಪೋಪುಶಾಯಿಯನ್ನು ಪ್ರತಿನಿಧಿಸುವ ಧಾರ್ಮಿಕ ವ್ಯವಸ್ಥೆಯು ಯೇಸುಕ್ರಿಸ್ತನು ನಡೆಸುವ ಯಾಜಕೋದ್ಯೋಗವನ್ನು ರದ್ದುಮಾಡುವುದಕ್ಕೂ ಇದನ್ನು ಗೊಂದಲಪಡಿಸುವುದಕ್ಕೂ ಪ್ರಯತ್ನಪಡುತ್ತದೆ.

ದಾನಿಯೇಲ 8:11 ರಲ್ಲಿ ಹೇಳಿರುವ "ನಿತ್ಯಹೋಮ" ಎಂಬ ಪದವು ಯಜ್ಞಗಳು, ಹೋಮಗಳು ಮತ್ತು ಪಾಪಿಗಳ ಪರವಾಗಿ ಸಲ್ಲಿಸುವ ಪ್ರಾರ್ಥನೆಗಳನ್ನೊಳಗೊಂಡ

ವಿವಿಧ ಸಂಸ್ಕಾರಗಳನ್ನು ತಪ್ಪದೇ ನಡೆಸಲು ಗೊತ್ತುಮಾಡಿದ ದೇವದರ್ಶನ ಗುಡಾರದಲ್ಲಿ ಏನು ನಡೆಯುತ್ತಿತ್ತೋ ಅದನ್ನು ಜ್ಞಾಪಕಕ್ಕೆ ತರುತ್ತದೆ. ಗುಡಾರದಲ್ಲಿ ನಡೆಯುತ್ತಿದ್ದ ಈ ಸಂಸ್ಕಾರಗಳ ಮುಖಾಂತರ ಪಾಪಿಗಳು ಕ್ಷಮಿಸಲ್ಪಡುತ್ತಿದ್ದರು ಮತ್ತು ಪಾಪಗಳಿಗೆ ಪ್ರಾಯಶ್ಚಿತ್ತವಾಗುತ್ತಿತ್ತು. ಭೂಮಿಯ ಮೇಲಿನ ದೇವದರ್ಶನ ಗುಡಾರದ ವ್ಯವಸ್ಥೆಯು ಯೇಸುಕ್ರಿಸ್ತನು ಪರಲೋಕದ ದೇವದರ್ಶನ ಗುಡಾರದಲ್ಲಿ ನಡೆಸುವ ಮಧ್ಯಸ್ಥನ ಸೇವೆಯನ್ನು ಪ್ರತಿನಿಧಿಸುತ್ತದೆ. ಪ್ರವಾದನೆಯು ಮುಂದಾಗಿ ಹೇಳಿದಂತೆ ಪೋಪುಶಾಹಿಯು ಯೇಸುಕ್ರಿಸ್ತನ ಮಧ್ಯಸ್ಥಿಕೆಯನ್ನು ಪಾದ್ರಿಗಳಿಗೆ ಬದಲಾಯಿಸುತ್ತದೆ. ಇಂತಹ ವ್ಯತಿರಿಕ್ತವಾದ ಆರಾಧನಾ ಕ್ರಮಗಳ ಮೂಲಕ ಚಿಕ್ಕಕೊಂಬು ಮಧ್ಯಸ್ಥಿಕೆಯ ಸೇವೆಯನ್ನು ತೆಗೆದುಬಿಡುವುದರಿಂದ ಸಾಂಕೇತಿಕವಾಗಿ ಕ್ರಿಸ್ತನ ಗುಡಾರವನ್ನು ಕೆಡವಿಬಿಡುತ್ತದೆ.

"ಮತ್ತು ಅದು ಧರ್ಮವನ್ನು ನೆಲಕ್ಕೆ ದೊಬ್ಬಿ ತನ್ನ ಇಷ್ಟಾರ್ಥವನ್ನು ನೆರವೇರಿಸಿಕೊಂಡು ವೃದ್ಧಿಗೆ ಬಂತು" (ದಾನಿ 8:12). ಯೇಸುಕ್ರಿಸ್ತನು ನಾನೇ ಸತ್ಯವೆಂದು ಸಾರಿ ಹೇಳಿದನು (ಯೋಹಾನ 14:6) ಮತ್ತು ದೇವರವಾಕ್ಯವೇ ಸತ್ಯವು ಎಂಬುದಾಗಿ ಹೇಳಿದನು (ಯೋಹಾನ 17:17). ಇದಕ್ಕೆ ಪ್ರತಿಯಾಗಿ ಪೋಪುಶಾಹಿಯು ಸತ್ಯವೇದವನ್ನು ಜನರ ಭಾಷೆಗೆ ತರ್ಜುಮೆ ಮಾಡುವುದನ್ನು ನಿಷೇಧಿಸಿತು. ಸತ್ಯವೇದ ವಾಕ್ಯಗಳ ವ್ಯಾಖ್ಯಾನವನ್ನು ಸಭೆಯ ಅಧಿಕಾರಕ್ಕೆ ವಹಿಸಿತು. ಆದರೆ ಅಭ್ಯಾಸದಲ್ಲಿ ನಮ್ಮ ನಂಬಿಕೆಗೆ ಆಧಾರವಾಗಿರುವ ಸತ್ಯವೇದಕ್ಕಿಂತ ಹೆಚ್ಚಿನ ಸ್ಥಾನವನ್ನು ಸಂಪ್ರದಾಯಕ್ಕೆ ನೀಡಿತು.

ಮಾನವ ಸಂಪ್ರದಾಯಗಳಿಗೆ ಪ್ರತಿಯಾಗಿ ಸತ್ಯವೇದದ ಸತ್ಯಗಳ ಜ್ಞಾನವನ್ನು ಹೊಂದುವುದು ಎಷ್ಟು ಮುಖ್ಯವೆಂದು ಈ ಅಧ್ಯಾಯವು ನಮಗೆ ಹೇಳುತ್ತದೆ?

**ಬುಧವಾರ** **ಫೆಬ್ರವರಿ 26**

## ದೇವದರ್ಶನ ಗುಡಾರದ ಶುದ್ಧೀಕರಣೆ

ದಾನಿಯೇಲ 8:14ನ್ನು ಓದಿರಿ. ಇಲ್ಲಿ ಏನು ನಡೆಯುತ್ತದೆ? ಕೊಂಬಿನ ನಾಶಕರವಾದ ಆಕ್ರಮಣದ ನಂತರ ದೇವದರ್ಶನ ಗುಡಾರವು ಶುದ್ಧೀಕರಿಸಲ್ಪಡುತ್ತದೆಯೆಂದು ಪ್ರಕಟಣೆಯಾಗುತ್ತದೆ. ಈ ಸಂದೇಶವನ್ನು ಅರ್ಥ

ಮಾಡಿಕೊಳ್ಳುವ ಸಲುವಾಗಿ ದಾನಿಯೇಲ 8:14 ರಲ್ಲಿ ಹೇಳಿರುವ ಪವಿತ್ರಾಲಯದ ಶುದ್ಧೀಕರಣೆಯು ದಾನಿಯೇಲ 7:9–14ರಲ್ಲಿರುವ ನ್ಯಾಯವಿಚಾರಣೆಯ ದೃಶ್ಯಕ್ಕೆ ಸಂವಾದಿಯಾಗಿದೆಯೆಂದು ನಮ್ಮ ಮನಸ್ಸಿನಲ್ಲಿಟ್ಟುಕೊಳ್ಳಬೇಕು. ನ್ಯಾಯವಿಚಾರಣೆಯು ಪರಲೋಕದಲ್ಲಿ ನಡೆಯುತ್ತಿರುವುದರಿಂದ ದೇವದರ್ಶನ ಗುಡಾರವೂ ಸಹ ಪರಲೋಕದಲ್ಲಿರುತ್ತದೆ. ಆದುದರಿಂದ ದಾನಿಯೆಲ 77ನೇ ಅಧ್ಯಾಯ ಮನುಷ್ಯನ ಆಗುಹೋಗುಗಳ ವಿಷಯ ಸಂಬಂಧವಾಗಿ ನ್ಯಾಯತೀರ್ಪಿನ ದೃಷ್ಟಿಯಿಂದ ದೇವರು ಮಧ್ಯಪ್ರವೇಶಿಸುವುದನ್ನು ಚಿತ್ರಿಸುತ್ತದೆ. ಹಾಗೆಯೇ ದಾನಿಯೇಲ 8ನೇ ಅಧ್ಯಾಯವು ದೇವದರ್ಶನ ಗುಡಾರ ದೃಷ್ಟಿಯಿಂದ ವಿವರಿಸುತ್ತದೆ. ಈ ಭೂಮಿಯ ದೇವದರ್ಶನ ಗುಡಾರವು ಪರಲೋಕ ದೇವದರ್ಶನ ಗುಡಾರದ ಮಾದರಿಯಾಗಿದ್ದು, ರಕ್ಷಣೆಯ ಯೋಜನೆಯನ್ನು ವಿಶಾಲವಾದ ಹೊರರೇಖೆಯನ್ನು ವಿವರಿಸುವ ಸಹಾಯ ಮಾಡುತ್ತದೆ. ಪ್ರತಿನಿತ್ಯವೂ ಪಾಪಿಗಳು ಬಲಿ ಅರ್ಪಿಸುವುದಕ್ಕೆ ದೇವದರ್ಶನ ಗುಡಾರಕ್ಕೆ ಬರುತ್ತಿದ್ದರು. ಅಲ್ಲಿ ಅವರು ಅರಿಕೆ ಮಾಡಿಕೊಂಡ ಪಾಪಗಳು ಕ್ಷಮಿಸಲ್ಪಡುತ್ತಿದ್ದವು ಮತ್ತು ಕ್ಷಮಿಸಲ್ಪಟ್ಟ ಪಾಪಗಳು ದೇವದರ್ಶನ ಗುಡಾರಕ್ಕೆ ವರ್ಗಾವಣೆಯಾಗುತ್ತಿದ್ದವು. ಈ ಕಾರಣವಾದ ದೇವದರ್ಶನ ಗುಡಾರವು ಮಲಿನವಾಗುತ್ತಿತ್ತು. ಆದುದರಿಂದ ಗುಡಾರವನ್ನು ಶುದ್ಧಮಾಡಲು ನಿಯತ ಕಾಲಿಕವಾಗಿ ಶುದ್ಧೀಕರಣ ಪ್ರಕ್ರಿಯೆ ಬೇಕಾಗುತ್ತಿತ್ತು. ಅದನ್ನು ಮಹಾ ದೋಷ ಪರಿಹಾರಕ ದಿನವೆಂದು ವರ್ಷಕ್ಕೊಮ್ಮೆ ಮಾಡುತ್ತಿದ್ದರು (ಯಾ.ಕಾಂಡ 16ನ್ನು ನೋಡಿರಿ).

ಪರಲೋಕದಲ್ಲಿರುವ ದೇವದರ್ಶನ ಗುಡಾರಕ್ಕೆ ಶುದ್ಧೀಕರಣೆ ಯಾಕೆ ಆಗಬೇಕು? ಪಶ್ಚಾತ್ತಾಪ ಪಟ್ಟ ಇಸ್ರಾಯೇಲ್ಯರ ಪಾಪಗಳು ಭೂಮಿಯ ಮೇಲಿನ ದೇವದರ್ಶನ ಗುಡಾರಕ್ಕೆ ವರ್ಗಾಯಿಸಲ್ಪಡುತ್ತಿದ್ದವು. ಅದೇ ಮೇರೆಗೆ ಯಾರು ಕ್ರಿಸ್ತನಲ್ಲಿ ನಂಬಿಕೆಯನ್ನಿಟ್ಟು ಪಾಪಗಳನ್ನು ಅರಿಕೆ ಮಾಡುತ್ತಾರೋ ಅವರು ಪಾಪಗಳು ಪರಲೋಕದ ದೇವದರ್ಶನ ಗುಡಾರಕ್ಕೆ ವರ್ಗಾಯಿಸಲ್ಪಡುತ್ತವೆ. ಭೂಮಿಯ ಮೇಲೆ ನಡೆಯುತ್ತಿದ್ದ ಮಹಾದೋಷಪರಿಹಾರಕ ದಿನದಂದು ಅನೇಕ ಪ್ರಾಣಿಗಳನ್ನು ತಂದು ಬಲಿ ಅರ್ಪಿಸುತ್ತಿದ್ದರು. ಇದು ಯೇಸುಕ್ರಿಸ್ತನು ಮುಂದೆ ಯಜ್ಞವಾಗಿ ಅರ್ಪಿತವಾಗುವುದನ್ನು ಸಂಕೇತಿಸುತ್ತದೆ.

ಭೂಮಿಯ ಮೇಲಿನ ಮಹಾದೋಷಪರಿಹಾರಕ ದಿನದಂದು ಗುಡಾರವು ಶುದ್ಧೀಕರಣಗೊಳ್ಳುತ್ತಿದ್ದಂತೆಯೇ ಪರಲೋಕದಲ್ಲಿ ಯೇಸುಕ್ರಿಸ್ತನ ರಕ್ತದಿಂದ ಇನ್ನೂ ಹೆಚ್ಚಾದ ರೀತಿಯಲ್ಲಿ ನ್ಯಾಯವಿಚಾರಣೆಯಿಂದ ಪಾರಾಗುತ್ತೇವೆ ಅಲ್ಲವೆ? ದಾನಿಯೇಲ 8:14ರಲ್ಲಿ ವರ್ಣಿಸಲ್ಪಟ್ಟಿರುವ ದೇವದರ್ಶನ ಗುಡಾರದ ಶುದ್ಧೀಕರಣೆಯು ಭೂಮಿಯು ಗುಡಾರಕ್ಕೆ ಮೂಲಪ್ರತಿಯಾಗಿರುವ ಪರಲೋಕದ್ದಾಗಿದೆ. ಇದರ ಮೂಲ ಸಂದೇಶವೇನೆಂದರೆ ಪಾಪಿಗಳಾದ ನಾವು ನಮ್ಮ ಪಾಪಗಳಿಗೆ ಕ್ಷಮಾಪಣೆ ಹೊಂದಿಕೊಂಡು ನ್ಯಾಯವಿಚಾರಣೆಯಲ್ಲಿ ನಿಲ್ಲುವುದಕ್ಕೆ ಸಮರ್ಥರಾಗುವುದಕ್ಕೆ ಮೆಸ್ಸೀಯನ ರಕ್ತವು ನಮಗೆ ಅಗತ್ಯವಾಗಿದೆ.

ಇಬ್ರಿಯ 9:23–28ನ್ನು ಓದಿರಿ. ಈ ವಾಕ್ಯಗಳು ಯೇಸುಕ್ರಿಸ್ತನ ಬಲಿಯಿಂದ ನಮಗಿರುವ ರಕ್ಷಣೆಯನ್ನು ಹೇಗೆ ಹೊರಪಡಿಸುತ್ತವೆ?

**ಗುರುವಾರ** **ಫೆಬ್ರವರಿ 27**

## ಪ್ರವಾದನಾ ವೇಳಾಪಟ್ಟಿ

ದಾನಿಯೆಲ 8:13ನ್ನು ಓದಿರಿ. ಇದರಲ್ಲಿರುವ ಪ್ರಶ್ನೆ ಯಾವುದು, ಇದು ಮುಂದಿನ ವಾಕ್ಯದಲ್ಲಿರುವ ಉತ್ತರವನ್ನು ಅರ್ಥಮಾಡಿಕೊಳ್ಳಲು ಹೇಗೆ ಸಹಾಯ ಮಾಡುತ್ತದೆ?

2300 ಉದಯಾಸ್ತಮಾನಗಳ ಕಾಲಾವಧಿ ಯಾವುದು? ಮೊದಲು ನಾವು ಏನನ್ನು ಗಮನಿಸಬೇಕೆಂದರೆ ದಾನಿಯೇಲನಿಗೆ ಟಗರು ನಂತರ ಹೋತ ತೋರಿಸಲ್ಪಟ್ಟ ಮೇಲೆ ಚಿಕ್ಕಕೊಂಬಿನ ಕಾರ್ಯಗಳು ಮತ್ತು ಅದು ಮಾಡುವ ಹಾನಿಗಳು ಜರುಗುತ್ತದೆ. ಆಮೇಲೆ ದರ್ಶನವು ದಾನಿಯೇಲ 8:13ರಲ್ಲಿ ಪ್ರಶ್ನೆಯಾಗಿ ತಿರುಗುತ್ತದೆ. ಪ್ರವಾದನೆಯ ಅವಧಿಯ ನಂತರ ಈ ಅವಧಿಯಾದ್ಯಂತ ಏನಾಗುತ್ತದೆ ಎಂಬುದಕ್ಕೆ ಪ್ರಶ್ನೆಯು ಸಂಬಂಧಿಸಿದೆ. ಮಾತ್ರವಲ್ಲ ಈ ಅವಧಿಯನ್ನು ಚಿಕ್ಕಕೊಂಬಿನ ಚಟುವಟಿಕೆಗಳಿಗೆ ಸೀಮಿತಗೊಳ್ಸಿವುದಕ್ಕಾಗುವುದಿಲ್ಲ. ಯಾಕೆಂದರೆ ದರ್ಶನದ ಅವಧಿಯು ಟಗರಿನ ಕಾಲದಿಂದ ಹಿಡಿದು ಚಿಕ್ಕಕೊಂಬು ಕ್ರಿಯೆ ನಡೆಸುವ ಕಾಲವನ್ನು ಒಳಗೊಂಡಿದೆ. ಆದುದರಿಂದ ಇದು ಚರಿತ್ರೆಯಲ್ಲಿ ನಿಜವಾದ ದೀರ್ಘಾವಧಿಯಾಗಿರುತ್ತದೆ. ಇದು "ಎಷ್ಟು ಕಾಲದವರೆಗೆ ಹೀಗೆ ನಡೆಯುವುದು"

ಎಂಬ ಪ್ರಶ್ನೆಗೆ ಟಗರು–ಮೇದ್ಯ ಪಾರಸಿಯ, ಹೋತ–ಗ್ರೀಕ್ ಮತ್ತು ಚಿಕ್ಕಕೊಂಬಿನ ಚಟುವಟಿಕೆಗಳು– ಅಕ್ರೈಸ್ತಶಾಹಿ ರೋಮ್ ಮತ್ತು ಪೋಪ್‌ಶಾಹಿರೋಮ್ ಕಾಲವನ್ನು ಒಳಗೊಂಡಿರುವ 2300 ದಿನಗಳೆಂದು ನಂತರ ಪವಿತ್ರಾಲಯಕ್ಕೆ ನ್ಯಾಯಸ್ಥಾಪನೆಯಾಗುವುದೆಂದು ಮತ್ತೊಬ್ಬ ದೂತನು ಉತ್ತರ ಕೊಡುತ್ತಾನೆ (ದಾನಿ 8:14). ಈಗಾಗಲೇ ಗಮನಿಸಿದಂತೆ ಈ ಅವಧಿಯು ಬಹಳ ದೀರ್ಘವಾದುದಾಗಿದೆ. ಯಾಕೆಂದರೆ ಇದರ ಆರಂಭವು ಮೇಧ್ಯ–ಪಾರಸಿಯ ಸಾಮ್ರಾಜ್ಯದಿಂದ ಶುರುವಾಗಿ ಗ್ರೀಕ್ ಸಾಮ್ರಾಜ್ಯದವರೆಗೆ ಮತ್ತು ಅಕ್ರೈಸ್ತಸ್ಥಾಹಿ ರೋಮ್, ಪೋಪುಶಾಹಿ ರೋಮ್‌ನವರೆಗೆ ಸಾವಿರಾರು ವರ್ಷಗಳು ಮುಂದುವರೆಯುತ್ತದೆ. ಚರಿತ್ರೆಗಾರರು ಅರ್ಥೈಸುವ ವಿಧಾನದ ಪ್ರಕಾರ (ಒಂದನೇ ಅಧ್ಯಾಯ ನೋಡಿರಿ) ಈ ಪ್ರವಾದನೆಯ ಅವಧಿಯನ್ನು ವರ್ಷ–ದಿನದ ನಿಯಮದ ಪ್ರಕಾರ ಲೆಕ್ಕಹಾಕಬೇಕು. 2300 ಉದಯಾಸ್ತಮಾನಗಳು 2300 ವರ್ಷಗಳ ಅವಧಿಗೆ ಸಮವಾಗಿದೆ. ಹಾಗೆ ಲೆಕ್ಕಹಾಕದೆ ಹೋದರೆ 2300 ದಿನಗಳು ಆರು ವರ್ಷಗಳ ಅಲ್ಪಾವಧಿಯಾಗಿ ಬಿಡುತ್ತದೆ. ದರ್ಶನದಲ್ಲಿ ಕಂಡ ಎಲ್ಲಾ ಘಟನೆಗಳು ನಡೆಯುವುದಕ್ಕೆ ಸಾಧ್ಯವಾಗದಷ್ಟು ಅಲ್ಪವಾಗುತ್ತದೆ. ಆದುದರಿಂದ ವರ್ಷ ಮತ್ತು ದಿನದ ನಿಯಮವು ಜರುಗಬೇಕು.

ದಾನಿಯೆಲ 8ನೇ ಅಧ್ಯಾಯವು ಈ ಕಾಲಾವಧಿಯ ಆರಂಭವನ್ನು ಲೆಕ್ಕ ಹಾಕುವುದಕ್ಕೆ ಬೇಕಾದ ಮಾಹಿತಿಯನ್ನು ನೀಡುವುದಿಲ್ಲ. ಆದರೆ ಕಾಲಾವಧಿಯ ಅಂತ್ಯವನ್ನು ಸ್ಥಾಪಿಸುತ್ತದೆ (ಗುರುತಿಸುತ್ತದೆ). ಆದರೆ ದಾನಿಯೇಲ 9ನೇ ಅಧ್ಯಾಯವು ಅಗತ್ಯವಾದ ಮಾಹಿತಿಯ ತುಣುಕನ್ನು ನೀಡುತ್ತದೆ (ಮುಂದಿನ ವಾರದ ಪಾಠವನ್ನು ನೋಡಿರಿ).

2300 ವರ್ಷಗಳ ಪ್ರವಾದನೆಯು ಸತ್ಯವೇದದಲ್ಲಿ ಬಹಳ ದೀರ್ಘಕಾಲದ ಪ್ರವಾದನೆಯಾಗಿದೆ. ಅದರ 2300 ವರ್ಷಗಳ ಬಗ್ಗೆ ಆಲೋಚಿಸಿ! ನಾವು ಎಷ್ಟು ಕಾಲ ಬದುಕುತ್ತೇವೆಂಬುದಕ್ಕೆ ಹೋಲಿಸಿಕೊಂಡರೆ ಇದು ಬಹಳ ದೀರ್ಘವಾದ ಅವಧಿಯಾಗಿದೆ? ಈ ಒಂದು ವ್ಯತ್ಯಾಸವು ನಾವು ದೇವರೊಟ್ಟಿಗೆ ಮತ್ತು ಕಡೆಯಕಾಲದ ಘಟನೆಗಳನ್ನು ನಡೆಯುವುದನ್ನು ಕಾಯ್ದುಕೊಂಡಿರುವಾಗ

ಸಹನೆಯಿಂದ ಇರುವುದನ್ನು ಕಲಿಸಲು ಹೇಗೆ ಸಹಾಯ ಮಾಡುತ್ತದೆ?

**ಶುಕ್ರವಾರ** **ಫೆಬ್ರವರಿ 28**

**ಹೆಚ್ಚಿನ ಚಿಂತನೆಗೆ :** ದಾನಿಯೇಲ 2, 7 ಮತ್ತು 8ನೇ ಅಧ್ಯಾಯಗಳಲ್ಲಿ ವರ್ಣಿಸಲ್ಪಟ್ಟಿರುವ ರಾಜ್ಯಗಳ ಅನುಕ್ರಮದ ಬಗ್ಗೆ ನಾವು ಇದುವರೆಗೆ ಏನನ್ನು ನೋಡಿದ್ದೇವೆಯೋ ಅದರ ಸಾರಾಂಶದ ಪಟ್ಟಿ ಕೆಳಗೆ ಕೊಡಲ್ಪಟ್ಟಿದೆ

| ದಾನಿಯೇಲ 2 | ದಾನಿಯೇಲ 7 | ದಾನಿಯೇಲ 8 |
|---|---|---|
| ಬ್ಯಾಬಿಲೋನ್ | ಬ್ಯಾಬಿಲೋನ್ | – |
| ಮೇಧ್ಯ–ಪಾರಸಿಯ | ಮೇಧ್ಯ–ಪಾರಸಿಯ | ಮೇಧ್ಯ–ಪಾರಸಿಯ |
| ಗ್ರೀಕ್ | ಗ್ರೀಕ್ | ಗ್ರೀಕ್ |
| ಅಕ್ರೈಸ್ತಶಾಹಿ ರೋಮ್ | ಅಕ್ರೈಸ್ತಶಾಹಿ ರೋಮ್ | ಅಕ್ರೈಸ್ತಶಾಹಿ ರೋಮ್ |
| ಪೋಪ್‌ಶಾಹಿ ರೋಮ್ | ಪೋಪ್‌ಶಾಹಿ ರೋಮ್ | ಪೋಪ್‌ಶಾಹಿ ರೋಮ್ |
| – | ಪರಲೋಕದ ನ್ಯಾಯವಿಚಾರಣೆ | ಪವಿತ್ರಾಲಯದ ಶುದ್ಧೀಕರಣೆ |

ಅಧ್ಯಾಯಗಳ ನಡುವೆ ಕೆಲವು ಸಾಮ್ಯತೆಯನ್ನು ನಾವು ಇಲ್ಲಿ ಕಾಣಬಹುದು. ಕೇವಲ ರಾಜ್ಯಗಳು ಮಾತ್ರವಲ್ಲ ದಾನಿಯೇಲ 7ನೇ ಅಧ್ಯಾಯದಲ್ಲಿರುವ ನ್ಯಾಯ ವಿಚಾರಣೆಯ ದೃಶ್ಯ ಪೋಪ್‌ಶಾಹಿ ರೋಮ್‌ನ 1260 ವರ್ಷಗಳ ನಂತರ (ಕ್ರಿ.ಶ. 538–1798) ತಲೆದೋರುತ್ತದೆ. ಇದನ್ನು ದಾನಿಯೇಲ 8ನೇ ಅಧ್ಯಾಯದಲ್ಲಿರುವ 'ಶುದ್ಧೀಕರಣೆಗೆ' ಹೋಲಿಸಬಹುದು. ಸಂಕ್ಷಿಪ್ತವಾಗಿ ಹೇಳುವುದಾದರೆ ಲೋಕದ ಅಂತ್ಯ ನಡೆಸುವ ನ್ಯಾಯವಿಚಾರಣೆ ದಾನಿಯೇಲ 7ನೇ ಅಧ್ಯಾಯದ ಪರಲೋಕದ ನ್ಯಾಯವಿಚಾರಣೆಯು ಮತ್ತು ದಾನಿಯೇಲ 8ನೇ ಅಧ್ಯಾಯದಲ್ಲಿರುವ ಶುದ್ಧೀಕರಣೆಯು ಒಂದೇ ಆಗಿವೆ. ಒಂದೇ ವಿಷಯದ ಬಗ್ಗೆ ಎರಡು ವಿಧವಾದ ವಿವರಣೆಯು ನಮಗೆ ಕೊಡಲ್ಪಟ್ಟಿದೆ. ಎರಡೂ ಕೂಡ ಚಿಕ್ಕಕೊಂಬು ತನ್ನ ಅಧಿಕಾರದಿಂದ ಎಸಗುವ ಹಿಂಸೆಯ ಕಾಲ 1260 ವರ್ಷಗಳ ನಂತರ ಘಟಿಸುತ್ತವೆ.

## ಚರ್ಚಿಸಬೇಕಾದ ಪ್ರಶ್ನೆಗಳು

1. ದೇವದರ್ಶನ ಗುಡಾರದ ಶುದ್ಧೀಕರಣೆ ದಾನಿಯೇಲ 7ರಲ್ಲಿರುವ ನ್ಯಾಯ ವಿಚಾರಣೆ ಎರಡೂ ಒಂದೇ ಆಗಿದ್ದು ಚಿಕ್ಕಕೊಂಬಿನ ಪ್ರವಾದನೆಯ ಕಾಲ 1260 ವರ್ಷಗಳ ನಂತರ ಮತ್ತು ದೇವರ ರಾಜ್ಯ ಸ್ಥಾಪನೆಯಾಗುವ

ಮೊದಲು ನಡೆಯಬೇಕೆಂದು ಮೇಲಿನ ಚಿತ್ರಪಟ ನಮಗೆ ಹೇಗೆ ತೋರಿಸುತ್ತದೆ?

2. ದಾನಿಯೇಲ 8ನೇ ಅಧ್ಯಾಯದ ಪ್ರವಾದನೆಯು ಚರಿತ್ರೆಯನ್ನು ಕೆಟ್ಟದ್ದೇ ತುಂಬಿರುವ ಒಂದು ತರದ ಕ್ರೂರವಾದದೆಂದು ಚಿತ್ರಿಸುತ್ತದೆ. ಎರಡು ಪ್ರಾಣಿಗಳು ಎರಡು ಸಾಮ್ರಾಜ್ಯಗಳು ಪರಸ್ಪರ ಹೋರಾಡುವುದಕ್ಕೆ ಸಾಂಕೇತಿಕವಾಗಿವೆ (ದಾನಿ 8:8–12). ಇವುಗಳ ನಂತರ ಬರುವ ಚಿಕ್ಕಕೊಂಬು ಬಲತ್ಕಾರಿಯು, ಹಿಂಸಾಚಾರಿಯು ಆಗಿರುತ್ತದೆ (ದಾನಿ 8:23–25). ಹಾಗಾಗಿ ದೇವರವಾಕ್ಯ ಈ ಲೋಕದಲ್ಲಿರುವ ಕಷ್ಟಸಂಕಟಗಳ ವಾಸ್ತವತೆಯನ್ನು ಅಲ್ಪವಾದದೆಣಿಸುವ ಪ್ರಯತ್ನ ಮಾಡುವುದಿಲ್ಲ. ನಮ್ಮ ಸುತ್ತಲೂ ತುಂಬಿರುವ ಕೆಟ್ಟದ್ದರ ವಾಸ್ತವತೆಯನ್ನು ಹೊರತುಪಡಿಸಿ ದೇವರ ಮೇಲೆ ಮತ್ತು ಆತನ ಒಳ್ಳೆಯತನದ ಮೇಲೆ ಭಸವಿಡಲು ಕಲಿಯುವಂತೆ ಇದು ಹೇಗೆ ಸಹಾಯ ಮಾಡುತ್ತದೆ?